॥ ಶ್ರೀ ಮಧ್ವಾಂತರ್ಗತ ಶ್ರೀಲಕ್ಷ್ಮೀನರಸಿಂಹಾಯ ನಮಃ ॥

॥ ಶ್ರೀನರಸಿಂಹದೇವರ ಸುಳಾದಿ ॥

॥ ರಾಗ ನಾಟಿ ಧ್ರುವತಾಳ ॥

ವೀರ ಸಿಂಹನೆ ನಾರಸಿಂಹನೆ ದಯಪಾರಾ।
ವಾರನೆ ಭಯ ನಿವಾರಣ ನಿರ್ಗುಣ ।
ಸಾರಿದವರ ಸಂಸಾರ ವೃಕ್ಷದ ಮೂಲ ।
ಬೇರರಿಸಿ ಕೀಳುವ ಬಿರಿದು ಭಯಂಕರ ।
ಘೋರಾವತಾರ ಕರಾಳ ವದನ ಅ - ।
ಘೋರ ದುರಿತ ಸಂಸಾರ ಮಾಯಾಕಾರ ।
ಕ್ರೂರ ದೈತ್ಯರ ಶೋಕ ಕಾರಣ ಉದುಭವ ।
ಈರೇಳು ಭುವನ ಸಾಗರದೊಡೆಯಾ ।
ಆ ರೌದ್ರ ನಾಮಾ ವಿಜಯ ವಿಠ್ಠಲ ನರಸಿಂಗ ।
ವೀರರಸಾತುಂಗ ಕಾರುಣ್ಯ ಪಾಂಗ ॥1॥

॥ ಮಟ್ಟತಾಳ ॥

ಮಗುವಿನ ರಕ್ಕಸನು ಹಗಲಿರುಳು ಬಿಡದೆ ।
ಹಗೆಯಿಂದಲಿ ಹೊಯ್ದು ನಗಪನ್ನಗವನಧಿ ।
ಗಗನ ಮಿಗಿಲಾದ ಅಗಣಿತ ಬಾಧಿಯಲಿ ।
ನೆಗದು ಒಗದು ಸಾವು ಬಗದು ಕೊಲ್ಲುತಿರಲು ಹೇ - ।
ಜಗದ ವಲ್ಲಭನೆ ಸಗುಣಾನಾದಿಗನೆ ।
ನಿಗಮಾ ವಂದಿತನೆ ಪೊಗಳಿದ ಭಕುತರ।
ತಗಲಿ ತೊಲಗನೆಂದೂ ಮಿಗೆ ಕೂಗುತಲಿರಲು।
ಯುಗಯುಗದೊಳು ದಯಾಳುಗಳ ದೇವರು ದೇವ।
ಯಗಾದಿ ಕೃತನಾಮಾ ವಿಜಯವಿಠ್ಠಲ ಹೋಹೋ।
ಯುಗಳ ಕರವ ಮುಗಿದು ಮಗುವು ಮೊರೆ ಇಡಲು ॥2॥

॥ ರೂಪಕ ತಾಳ ॥

ಕೇಳಿದಾಕ್ಷಣದಲಿ ಲಾಲಿಸಿ ಭಕ್ತನ್ನ ।
ಮೌಳಿ ವೇಗದಲಿ ಪಾಲಿಸುವೆನೆಂದು।
ತಾಳಿ ಸಂತೋಷವ ತೂಳಿ ತುಂಬಿದಂತೆ।
ಮೂರ್ಲೋಕದ ಪತಿವಾಲಯದಿಂದ ಸು।
ಸೀಲ ದುರ್ಲಭ ನಾಮ ವಿಜಯ ವಿಠ್ಠಲ ಪಂಚ।
ಮೌಳಿ ಮಾನವ ಕಂಭ ಸೀಳಿ ಮೂಡಿದ ದೇವ ॥3॥

॥ ಝಂಪಾ ತಾಳ ॥

ಲಟಲಟಾ ಲಟಲಟಾ ಲಟಕಟಿಸಿ ವನಜಾಂಡ।
ಕಟಹ ಪಟಪಟ ಪುಟುತ್ಕಟದಿ ಬಿಚ್ಚುತಲಿರಲು।
ಪುಟಪುಟ ಪುಟನೆಗೆದು ಚೀರಿ ಹಾರುತ್ತ ಪ।
ಲ್ಕಟ ಕಟಾ ಕಟ ಕಡಿದು ರೋಷದಿಂದ।
ಮಿಟಿ ಮಿಟಿ ಮಿಟನೆ ರಕ್ತಾಕ್ಷಿಯಲ್ಲಿ ನೋಡಿ।
ತಟಿತ್ಕೋಟಿ ಊರ್ಭಟಗೆ ಅರ್ಭಟವಾಗಿರಲು।
ಕುಟಿಲ ರಹಿತ ವ್ಯಕ್ತ ವಿಜಯ ವಿಠ್ಠಲ ಶಕ್ತ।
ದಿಟನಿಟಿಲ ನೇತ್ರ ಸುರ ಕಟಕ ಪರಿಪಾಲ ॥4॥

॥ ತ್ರಿವಿಡ ತಾಳ ॥

ಬೊಬ್ಬಿರಿಯೇ ವೀರ ಧ್ವನಿಯಿಂದ ತನಿಗಿಡೆ।
ಹಬ್ಬಿ ಮುಂಜೋಣಿ ಉರಿ ಹೊಗರೆದ್ದು ಸುತ್ತೆ।
ಉಬ್ಬಸ ರವಿಗಾಗೆ ಅಬ್ಜ ನಡಗುತಿರೆ।
ಅಬ್ಧಿ ಸಪುತ ಉಕ್ಕಿ ಹೊರಚಲ್ಲಿ ಬರುತಿರೆ।
ಅಬುಜ ಭವಾದಿಗಳು ತಬ್ಬಬ್ಬಿ ಗೊಂಡಾರಿ ।
ಅಬ್ಬರ ವೇನೆನುತ ನಭದ ಗೂಳಿಯು ತಗಿಯೆ ।
ಶಬ್ದ ತುಂಬಿತು ಅವ್ಯಾಕೃತಾಕಾಶ ಪರಿಯಂತ ।
ನಿಬ್ಬರ ತರುಗಿರಿ ಝುರಿಝುರಿಸಲು।
ಒಬ್ಬರಿಗೊಶವಲ್ಲದ ನಮ್ಮಾ ವಿಜಯವಿಠ್ಠಲ।
ಇಬ್ಬಗೆಯಾಗಿ ಕಂಭದಿಂದ ಪೊರಮಟ್ಟಾ ॥5॥

॥ ಅಟ್ಟತಾಳ ॥

ಘುಡಿಘುಡಿಸುತ ಕೋಟಿ ಸಿಡಿಲು ಗಿರಿಗೆ ಬಂದು ।
ಹೊಡೆದಂತೆ ಚೀರಿ ಬೊಬ್ಬಿಡುತಲಿ ಲಂಘಿಸಿ ।
ಹಿಡಿದು ರಕ್ಕಸನ್ನ ಕೆಡಹಿ ಮಡುಹಿ ತುಡುಕಿ ।
ತೊಡಿಯ ಮೇಲಿರಿಸಿ ಹೇರೊಡಲ ಕೂರುಗುರದಿಂದ ।
ಪಡುವಲ ಗಡಲ ತಡಿಯ ತರಣಿಯ ನೋಡಿ ।
ಕಡು ಕೋಪದಲಿ ಸದಬಡಿದು ರಕ್ಕಸನ ಕೆಡಹಿ।
ನಿಡಿ ಗರುಳನು ಕೊರಳೆಡಿಯಲ್ಲಿ ಧರಿಸಿದ ಸಡಗರದ ದೈವ।
ಕಡುಗಲಿ ಭೂರ್ಭುವ ವಿಜಯ ವಿಠ್ಠಲ।
ಪಾಲ್ಗಡಲೊಡಿಯಾ ಶರಣರ ವಡೆವೆ ವಡನೊಡನೆ ॥6॥

॥ ಏಕತಾಳ ॥

ಉರಿ ಮಸೆಗೆ ಚತುರ್ದಶ ಧರಣಿ ತಲ್ಲಣಿಸಲು।
ಪರಮೇಷ್ಠಿ ಹರಸುರರು ಸಿರಿದೇವಿಗೆ ಮೊರೆಯಿಡಲು।
ಕರುಣದಿಂದಲಿ ತನ್ನ ಶರಣನ್ನ ಸಹಿತ ನಿನ್ನ।
ಚರಣಕ್ಕೆ ಯೆರಗಲು ಪರಮ ಶಾಂತನಾಗಿ।
ಹರಹಿದೆ ದಯವನ್ನು ಸುರರು ಕುಸುಮ ವರುಷ।
ಗರಿಯಲು ಭೇರಿವಾದ್ಯ ಮೊರೆಯುತ್ತರರೆ ಎನುತ।
ಪರಿ ಪರಿ ವಾಲಗ ವಿಸ್ತಾರದಿಂದ ಕೈಕೊಳ್ಳುತ್ತ।
ಮೆರೆದು ಸುರರುಪದ್ರ ಹರಿಸಿ ಬಾಲಕನ ಕಾಯ್ದೆ।
ಪರದೈವ ಗಂಭೀರಾತ್ಮ ವಿಜಯ ವಿಠ್ಠಲ ನಿಮ್ಮ।
ಚರಿತೆ ದುಷ್ಟರಿಗೆ ಭೀಕರವೋ ಸಜ್ಜನಪಾಲಾ ॥7॥

॥ ಜತೆ ॥

ಪ್ರಲ್ಹಾದ ವರದ ಪ್ರಪನ್ನ ಕ್ಲೇಶ ಭಂಜನ್ನ।
ಮಹ ಹವಿಷೆ ವಿಜಯ ವಿಠ್ಠಲ ನರಮೃಗವೇಷಾ ॥8॥

॥ ಶ್ರೀ ವಿಜಯದಾಸಗುರ್ವಂತರ್ಗತ ಶ್ರೀವಾದಿರಾಜಗುರ್ವಂತರ್ಗತ
ಶ್ರೀಮಧ್ವಾಂತರ್ಗತ ಶ್ರೀಲಕ್ಷ್ಮೀನರಸಿಂಹಾರ್ಪಣಮಸ್ತು ॥